ಜೆಎಸ್ಎಸ್ ಮಹಾವಿದ್ಯಾಪೀಠ

# ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ • ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-೫೭೦ ೦೦೪

☎ 0821-2548236 & 2548380 Fax: 0821-2548238 E-mail: jssautonomous@gmail.com

ಸಂಖ್ಯೆ: ಜೆಎಸ್ಎಸ್‌ಸಿಎಂ/ /2013-14 ದಿನಾಂಕ: 01-11-2013

## ಪ್ರಕಟಣೆಯ ಕೃಪೆಗಾಗಿ

## 'ಜಾನಪದರ ಹೃದಯವಂತಿಕೆ ನಮ್ಮದಾಗಬೇಕು'

-ಶ್ರೀ. ಗೊ.ರು.ಪರಮೇಶ್ವರಪ್ಪ

'ಕನ್ನಡನಾಡಿನ ಸಾಹಿತ್ಯ, ಸಂಸ್ಕೃತಿ ಮತ್ತು ಭೌಗೋಳಿಕ ವೈಶಿಷ್ಯಗಳು ಅತ್ಯಂತ ವೈವಿಧ್ಯತೆಯಿಂದಕೂಡಿಇಡೀ ಭಾರತದಲ್ಲೇ ಅನುಪಮ ಎನಿಸಿದೆ. 12ನೇ ಶತಮಾನದ ಶರಣರು ಸಂಸ್ಕೃತದ ಹಿಡಿತದಿಂದಕನ್ನಡವನ್ನು ಪಾರುಮಾಡಿಕನ್ನಡವನ್ನು ದೇವಭಾಷೆಯನ್ನಾಗಿಸಿದರು.ಕರ್ನಾಟಕಏನೆಲ್ಲಾ ಶ್ರೀಮಂತ ಪರಂಪರೆಯನ್ನು ಹೊಂದಿದ್ದರೂಗಡಿ ಸಮಸ್ಯೆ, ಅನ್ಯಭಾಷೆಗಳ ದಾಳಿ, ಇಂಗ್ಲೀಷ್ ವ್ಯಾಮೋಹ, ಮಾತ್ರ ಭಾಷಾಭಿಮಾನದಕೊರತೆ ಮುಂತಾದ ಸಮಸ್ಯೆಗಳು ನಮ್ಮನ್ನುಕಾಡುತ್ತಿವೆ.ಅವುಗಳನ್ನು ಮೀರಿಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾಗಿದೆ' ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಜಿಲ್ಲಾಧ್ಯಕ್ಷರಾದ ಶ್ರೀ ಗೊ.ರು.ಪರಮೇಶ್ವರಪ್ಪಅವರುಕರೆ ನೀಡಿದರು.

ಮೈಸೂರಿನಊಟಿರಸ್ತೆಯಲ್ಲಿರುವಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನಕಾಲೇಜಿನಲ್ಲಿ ಏರ್ಪಡಿಸಿದ್ದ 58ನೇ ಕನ್ನಡರಾಜ್ಯೋತ್ಸವ ಸಮಾರಂಭದಲ್ಲಿಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಿದ್ದರು.'ಕನ್ನಡ ಸಾಹಿತ್ಯ, ಜಾನಪದ ಮತ್ತುರಂಗಭೂಮಿ ವೈಶಿಷ್ಟ್ಯತೆಯಿಂದ ಕೂಡಿದೆ. ಜಾನಪದರ ಹೃದಯ ವಂತಿಕೆಯನ್ನು ಮೈಗೂಡಿಸಿಕೊಳ್ಳಬೇಕು. ನಮ್ಮ ನಾಡು ಸಮೃದ್ಧ ನಾಡಾಗಲಿ, ನಾವು ಸ್ವಾಭಿಮಾನಿಗಳಾಗೋಣ.ಕನ್ನಡ ನಾಡಿನ ವಾರಸುದಾರರಾದ ವಿದ್ಯಾರ್ಥಿಗಳು ಆ ಜವಾಬ್ದಾರಿಯನ್ನು ಹೊತ್ತು ಸಮರ್ಥವಾಗಿ ನಿರ್ವಹಿಸಬೇಕು' ಎಂದುಹೇಳಿದರು.

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಹಾಗೂ ಸ್ನಾತಕ ವಿಭಾಗದ ವಿದ್ಯಾರ್ಥಿಗಳಿಂದ ರಚಿತವಾದ 'ಭಾವತರಂಗ ಮತ್ತು ವಿಚಾರ ದೀಪ್ತಿ' ಎಂಬ ಭಿತ್ತಿ ಪತ್ರಿಕೆಗಳನ್ನು ಮುಖ್ಯ ಅತಿಥಿಗಳು ಬಿಡುಗಡೆ ಮಾಡಿದರು.ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ವೇದಿಕೆಯಲ್ಲಿಕಾಲೇಜಿನಪ್ರಾಚಾರ್ಯರಾದ ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್, ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕರಾದಡಾ. ಎನ್.ಪಿ. ನಟರಾಜ, ಪದವಿಪೂರ್ವ ವಿಭಾಗದ ಪ್ರಾಚಾರ್ಯರಾದ ಶ್ರೀ ಎಸ್. ಸೋಮಶೇಖರಅವರು ಉಪಸ್ಥಿತರಿದ್ದರು.

ವಿಭಾಗದ ಮುಖ್ಯಸ್ಥರಾದಡಾ. ಎಂ.ಸಿ. ಸರೋಜಮ್ಮಣ್ಣಿಅವರು ಸ್ವಾಗತಿಸಿದರು. ಸಾಂಸ್ಕೃತಿಕಕಾರ್ಯಕ್ರಮದ ನಿರೂಪಣೆಯನ್ನು ಶ್ರಿ ಸಂತೋಷ್‌ಕುಮಾರ್‌ಅವರು ನಡೆಸಿಕೊಟ್ಟರು. ಡಾ. ಬಿ. ಪ್ರಭುಸ್ವಾಮಿಅವರುಕಾರ್ಯಕ್ರಮವನ್ನುನಿರೂಪಿಸಿದರು. ಡಾ. ಬಿ.ಎಸ್. ಸುದೀಪ್‌ಅವರು ವಂದಿಸಿದರು.

(ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್)

ಪ್ರಾಂಶುಪಾಲರು

ಜೆ. ಎಸ್. ಎಸ್. ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-570 004

ಗೆ

ಸಂಪಾದಕರು / ವರದಿಗಾರರು

- - - - - - - - - - - - - - -

- - - - - - - - - - - - - - -